APRIL 14, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಭಾರತರತ್ನ ಬಿ.ಆರ್. ಅಂಬೇಡ್ಕರ್ ಅವರ, 134ನೇ ಜಯಂತ್ಯುತ್ಸವ; ಇಂದು ನಾಡಿನಾದ್ಯಂತ, ಶ್ರದ್ಧಾ ಸುಮನ ಅರ್ಪಣೆ.
- ಬಾಬಾಸಾಹೇಬರು, ಬೆಳಗಾವಿ ಹಾಗೂ ನಿಪ್ಪಾಣಿಗೆ ಭೇಟಿ ನೀಡಿ, 100 ವರ್ಷಗಳು ಪೂರ್ಣ; ವಿವಿಧೆಡೆ ಅರ್ಥಪೂರ್ಣ ಕಾರ್ಯಕ್ರಮ.
- ಜಾತಿ ಗಣತಿ ವರದಿ; ಎಲ್ಲರಿಗೂ ನ್ಯಾಯ ಒದಗಿಸಲು, ರಾಜ್ಯ ಸರ್ಕಾರ ಬದ್ಧ – ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ.
- 'ಸಂವಿಧಾನ ಓದು', ರಾಜ್ಯ ಮಟ್ಟದ ಎರಡು ದಿನಗಳ, ಅಧ್ಯಯನ ಶಿಬಿರಕ್ಕೆ, ಬೆಳಗಾವಿಯಲ್ಲಿ ಚಾಲನೆ.

<><><>

ಈಗ ವಾರ್ತೆಗಳ ವಿವರ

<><><>

ಭಾರತರತ್ನ, ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ಜಯಂತಿ ಹಾಗೂ ಸಂವಿಧಾನ ಅನುಷ್ಠಾನಗೊಂಡು, 75 ವರ್ಷಗಳು ಪೂರ್ಣಗೊಂಡ ಹಿನ್ನೆಲೆ, 'ಜೈ ಭೀಮ್' ಪಾದಯಾತ್ರೆಯನ್ನು ದೇಶಾದ್ಯಂತ ಸುಮಾರು 5 ಸಾವಿರ ಸ್ಥಳಗಳಲ್ಲಿ, ಕೇಂದ್ರ ಸರ್ಕಾರ ಆಯೋಜಿಸಿದೆ.

<><><>

ಬಾಬಾಸಾಹೇಬ ಅಂಬೇಡ್ಕರ್ ಅವರ, 134ನೇ ಜಯಂತಿ ಹಿನ್ನೆಲೆ, ಸಮಾಜ ಕಲ್ಯಾಣ ಇಲಾಖೆ, 2023, 24 ಹಾಗೂ 25ನೇ ಸಾಲಿನ, ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಯನ್ನು, ನಾಡಿನ ವಿವಿಧ ಕ್ಷೇತ್ರಗಳ ಸಾಧಕರಿಗೆ, ಪ್ರಕಟಿಸಿದೆ. ಇಂದು ಬೆಳಗ್ಗೆ 10.45ಕ್ಕೆ, ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ಆಯೋಜಿತ ಭವ್ಯ ಸಮಾರಂಭದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ಗಣ್ಯರು, ಸಾಧಕ ಸಜ್ಜನರಿಗೆ ಪ್ರಶಸ್ತಿಗಳನ್ನು ಪ್ರದಾನಿಸಿ, ಸನ್ಮಾನಿಸಲಿದ್ದಾರೆ.

<><><>

ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯದ, ಬಿ.ಆರ್.ಅಂಬೇಡ್ಕರ್ ಅಧ್ಯಯನ ವಿಭಾಗ, ಬೆಂಗಳೂರಿನ ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ, 'ಭಾರತದ ಅಲಕ್ಷಿತ ಸಮುದಾಯಗಳಿಗೆ ಡಾಕ್ಟರ್ ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆಗಳು' ವಿಷಯದ ಕುರಿತು, ಇಂದು ರಾಷ್ಟ್ರೀಯ ವಿಚಾರ ಸಂಕಿರಣ, ಆಯೋಜಿಸಿದೆ. ಸುವರ್ಣ ಮಹೋತ್ಸವ ಭವನದಲ್ಲಿ, ಇಂದು ಬೆಳಗ್ಗೆ 10.30ಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ. ಕೇಂದ್ರ ಸಚಿವ

ಪ್ರಲ್ಹಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಥಿತಿಗಳಾಗಿ ಪಾಲ್ಗೊಳ್ಳಲಿದ್ದಾರೆ. ವಿಧಾನಸಭೆ ವಿಪಕ್ಷ ಸಹ ನಾಯಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

ಭಾರತ ರತ್ನ, ಬಾಬಾಸಾಹೇಬ ಅಂಬೇಡ್ಕರ್ ಅವರು, ಬೆಳಗಾವಿ ಹಾಗೂ  ನಿಪ್ಪಾಣಿಗೆ ಭೇಟಿ ನೀಡಿ, ಕಳೆದ 10 ಮತ್ತು 11ನೇ ತಾರೀಖು, ನೂರು ವರ್ಷಗಳು ಪೂರ್ಣಗೊಂಡವು. ಅಂದಿನ ಅವರ ಭೇಟಿ, ಐತಿಹಾಸಿಕ ಮಹತ್ವ ಪಡೆದಿದೆ. ಅಂದಿನ ಮುಂಬೈ–ಕರ್ನಾಟಕ ಹಾಗೂ ಇಂದಿನ ಕಿತ್ತೂರು ಕರ್ನಾಟಕದ, ದಲಿತ ಸಮುದಾಯಗಳ ಸಬಲೀಕರಣಕ್ಕೆ, ಅಡಿಪಾಯ ಹಾಕಿದ ಮಹತ್ವದ ಭೇಟಿ, ಅದಾಗಿತ್ತು.

ಈ ಕುರಿತು ಒಂದು, ವರದಿ..

*ಸಂವಿಧಾನ ಶಿಲ್ಪಿ, ಡಾಕ್ಟರ್ ಬಾಬಾಸಾಹೇಬರು, 1925ರ ನವೆಂಬರ್ 11 ಹಾಗೂ 12 ರಂದು, ಬೆಳಗಾವಿಯಲ್ಲಿ ಅವರು, 'ಬಹಿಷ್ಕೃತ ಹಿತಕಾರಿಣಿ ಸಭೆ'ಯ 3ನೇ ಸಮಾವೇಶ ನಡೆಸಿದರು. ಮೌಢ್ಯ, ದೇವದಾಸಿ ಪದ್ಧತಿ, ಬಡತನ, ಅನಕ್ಷರತೆಯಂತಹ, ಅನಿಷ್ಟಗಳ ವಿರುದ್ಧ ದೃಢವಾದ ಧ್ವನಿ ಎತ್ತಲು, ದಮನಿತ ಸಮುದಾಯಗಳಿಗೆ ಆಸರೆಯಾದರು.*

*ಎರಡು ವರ್ಷಗಳ ಬಳಿಕ, 1927ರ ಮೇ 15 ರಂದು, ಬೆಳಗಾವಿ ಜಿಲ್ಲೆ ಹುಕ್ಕೇರಿಯ ಗಾವನಾಳ ಗ್ರಾಮದಲ್ಲಿ, ಬಹಿಷ್ಕೃತ ಹಿತಕಾರಿಣಿ ಸಭಾದ, 5ನೇ ಅಧಿವೇಶನ ನಡೆಸಿದರು. ಸಾವಿರಾರು ಜನ ಪಾಲ್ಗೊಂಡಿದ್ದ ಈ ಸಮಾವೇಶದಲ್ಲಿ, ಬಾಬಾಸಾಹೇಬರು, ದಲಿತ ಸಮುದಾಯಗಳಿಗೆ, ದೇವಸ್ಥಾನ, ಕೆರೆ, ಕಟ್ಟೆ, ಬಾವಿ, ಉಪಾಹಾರ ಮಂದಿರ, ಶಾಲೆಗಳಲ್ಲಿ ಮುಕ್ತ ಪ್ರವೇಶ ನೀಡಬೇಕು ಎಂಬ, ಶಾಸನ ರಚನೆಗೆ ನಿರ್ಣಯ ಅಂಗೀಕರಿಸಿದರು.*

*1929ರ ಮಾರ್ಚ್ 23 ರಂದು ಬೆಳಗಾವಿಗೆ ಆಗಮಿಸಿದ್ದ ಅವರು, ಸಾಮಾಜಿಕ ಪರಿಷತ್ತಿನ ಪ್ರಥಮ ಸಮಾವೇಶದಲ್ಲಿ ಭಾಗವಹಿಸಿ, ದಲಿತರ ಸಬಲೀಕರಣಕ್ಕೆ ಸಾಮಾಜಿಕ, ರಾಜಕೀಯ ಹಕ್ಕುಗಳು ಅವಶ್ಯ ಎಂದು, ಪ್ರತಿಪಾದಿಸಿದರು.*

*ಬಾಬಾಸಾಹೇಬರು, ಕರ್ನಾಟಕಕ್ಕೆ ಪ್ರಥಮ ಬಾರಿಗೆ ಭೇಟಿ ನೀಡಿದ್ದು, 1937ರ ಮೇ 31 ರಂದು, ಬಿಜಾಪುರದಲ್ಲಿ ನಡೆದ, ಜಿಲ್ಲಾ ಹರಿಜನ ಪರಿಷತ್ತಿನ ಸಮಾವೇಶದಲ್ಲಿ ಅವರು ಭಾಗವಹಿಸಿ, ಮಾರ್ಗದರ್ಶನ ಮಾಡಿದ್ದರು.*

*ಈ ಹಿನ್ನೆಲೆಯಲ್ಲಿ, ಬಿಜೆಪಿ 'ಭೀಮ ಹೆಜ್ಜೆ –100ರ ಸಂಭ್ರಮ' ರಥಯಾತ್ರೆಗೆ ಚಾಲನೆ ನೀಡಿದೆ. ಕಳೆದ 11ನೇ ತಾರೀಖು, ಬೆಂಗಳೂರಿನಿಂದ ಆರಂಭವಾದ ಈ ಯಾತ್ರೆ, ಇಂದು ಅಂಬೇಡ್ಕರ್ ಜಯಂತಿ ದಿನ, ಬೆಳಗಾವಿ ತಲುಪಲಿದೆ. ನಾಳೆ ನಿಪ್ಪಾಣಿಯಲ್ಲಿ ಬೃಹತ್ ಸಮಾವೇಶ ಆಯೋಜಿತವಾಗಿದೆ.*

<><><>

ವಿವೇಕ ಧ್ವನಿ 80 ಸೆಕೆಂದುಗಳು

<><><>

ಡಾಕ್ಟರ್ ಬಿ.ಆರ್.ಅಂಬೇಡ್ಕರ್ ಅವರು, 1931ರಲ್ಲಿ ಧಾರವಾಡಕ್ಕೆ ಆಗಮಿಸಿ, ಇಲ್ಲಿನ ಮರಾಠಾ ಕಾಲೋನಿ ಬಳಿಯ, ಕೊಪ್ಪದಕೇರಿಯ ಬುದ್ಧ ರಕ್ಷಿತ ವಸತಿಯುತ ಬಾಲಕರ ಪ್ರೌಢ ಶಾಲೆಯನ್ನು ಆರಂಭಿಸಿದರು.

ಪ್ರಸ್ತುತ, ಅವರ ಮರಿಮೊಮ್ಮಗ ಡಾಕ್ಟರ್ ಪ್ರಕಾಶರಾವ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ, ಡಾಕ್ಟರ್ ಬಿ.ಆರ್.ಅಂಬೇಡ್ಕರ್ ಎಜ್ಯುಕೇಷನಲ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ.

<><><>

ಸ್ವಾತಂತ್ರ್ಯ ಪೂರ್ವದಲ್ಲಿ, 1927ರಲ್ಲಿ ಪ್ರಥಮ ಬಾರಿಗೆ ಧಾರವಾಡಕ್ಕೆ ಭೇಟಿ ನೀಡಿದ ಅಂಬೇಡ್ಕರ್ ಅವರು, ಇಲ್ಲಿನ ಪರಿಶಿಷ್ಟ ಸಮುದಾಯಗಳಿಗೆ ತಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ, ಚಿಂತಿಸುವಂತೆ ಪ್ರೇರೇಪಿಸಿದರು.

<><><>

ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಧಾರವಾಡದ ಡಾಕ್ಟರ್ ಹಿರೇಮಲ್ಲೂರು ಈಶ್ವರನ್ ವಿಜ್ಞಾನ ಹಾಗೂ ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ, ಶಶಿಧರ ತೋಡಕರ್.

<><><>

ಶಶಿಧರ ತೋಡಕರ್ ಧ್ವನಿ 60 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಜಾತಿ ಗಣತಿ ವರದಿ ಬಿಡುಗಡೆ ವಿಚಾರದಲ್ಲಿ, ಆತುರದ ನಿರ್ಧಾರವನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುವುದಿಲ್ಲ; ವರದಿಯ ಸತ್ಯಾಂಶಗಳನ್ನು ಅಧ್ಯಯನ ಮಾಡಿ, ಎಲ್ಲರಿಗೂ ನ್ಯಾಯ ಒದಗಿಸುವ ಕಾರ್ಯ ಮಾಡಲಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ, ಸುದ್ದಿಗಾರರೊಂದಿಗೆ ಅವರು, ಮಾತನಾಡಿದರು. ಜಾತಿ ಗಣತಿ ವರದಿ ಸಚಿವ ಸಂಪುಟದಲ್ಲಿ ಸಮಗ್ರವಾಗಿ ಚರ್ಚೆಯಾಗಲಿದೆ. ಬಳಿಕ, ಸದನದಲ್ಲಿ ಮಂಡನೆಯಅಗಲಿದೆ ಎಂದು, ಮುಖ್ಯಮಂತ್ರಿ ತಿಳಿಸಿದ್ದಾಗಿ ಸ್ಪಷ್ಟ ಪಡಿಸಿದರು.

<><><>

ಬಳ್ಳಾರಿ ಜಿಲ್ಲೆ, ಕುರುಗೋಡು ತಾಲೂಕು, ಕಲ್ಲು ಕಂಬದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ, ನಗರಾಭಿವೃದ್ಧಿ ಖಾತೆ ಸಚಿವ ಬೈರತಿ ಬಸವರಾಜ ಅವರು, 17ನೇ ತಾರೀಖು ವಿಶೇಷ ಸಚಿವ ಸಂಪುಟ ಸಭೆಯಲ್ಲಿ, ವಿವರವಾಗಿ ಜಾತಿ ಗಣತಿ ವರದಿ ಬಗ್ಗೆ ಚರ್ಚೆ ನಡೆಯಲಿದೆ ಎಂದರು.

<><><>

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಧಾರವಾಡದಲ್ಲಿ ಹಾಗೂ ಕೇಂದ್ರದ ರಾಜ್ಯ ಖಾತೆ ರೇಲ್ವೆ ಸಚಿವ ವಿ. ಸೋಮಣ್ಣ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿ, ಜಾತಿ ಗಣತಿ ವರದಿಯನ್ನು ವೈಜ್ಞಾನಿಕವಾಗಿ ಕೈಗೊಳ್ಳಬೇಕು ಎಂದು, ಆಗ್ರಹಿಸಿದರು.

<><><>

ಕಾಲ ಬದಲಾದಂತೆ, ಸಮಸ್ಯೆ, ಸವಾಲುಗಳು ಮುಂದುವರೆದಿವೆ; ಕೆಲವು ಹೊಸ ರೂಪ ತಳೆದಿವೆ. ಇವುಗಳನ್ನು ಪರಿಹರಿಸಬಲ್ಲ ಏಕೈಕ ಮಾರ್ಗವೆಂದರೆ, ಅದು ಸಂವಿಧಾನದ ದಾರಿ ಮಾತ್ರ ಎಂದು, ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್, ಹೇಳಿದ್ದಾರೆ. ಬೆಳಗಾವಿಯ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಸರ್ಕಾರಿ ಮಹಾವಿದ್ಯಾಲಯದಲ್ಲಿ, ರಾಜ್ಯ ಮಟ್ಟದ ಎರಡು ದಿನಗಳ, 'ಸಂವಿಧಾನ ಓದು' ಅಧ್ಯಯನ ಶಿಬಿರವನ್ನು, ಉದ್ಘಾಟಿಸಿ ಅವರು ಮಾತನಾಡಿದರು. ಸಂವಿಧಾನವೇ ಪರಮೋಚ್ಚ. ಪ್ರತಿಯೊಬ್ಬ ನಾಗರಿಕ, ಸಂವಿಧಾನದ ಬಗ್ಗೆ ಆಳವಾದ ಅಧ್ಯಯನ ಮತ್ತು ಜ್ಞಾನ ಹೊಂದಿರಬೇಕು ಎಂದರು. ಸಂವಿಧಾನ ಓದು ಇಂಗ್ಲಿಷ್ ಕೃತಿ ಈ ಸಂದರ್ಭದಲ್ಲಿ, ಲೋಕಾರ್ಪಣೆಗೊಂಡಿತು.

<><><>

‘ವಿಜಯಪುರ ಜಿಲ್ಲೆಯ ಮಣ್ಣು ಮತ್ತು ಬಿಸಿಲು, ಈ ಭಾಗದ ರೈತರಿಗೆ ವರದಾನ; ಒಂದು ಬೊಗಸೆ ನೀರು ಸಿಕ್ಕರೆ, ಅವರ ಬದುಕು ಸಮೃದ್ಧವಾಗುತ್ತದೆ’ ಎಂಬ, ಶ್ರೀ ಸಿದ್ದೇಶ್ವರ ಸ್ವಾಮೀಜಿ ಆಶಯದಂತೆ ನಡೆದುಕೊಂಡಿರುವುದು, ತಮಗೆ ಆತ್ಮ ತೃಪ್ತಿ ತಂದಿದೆ ಎಂದು, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ. ಧನ್ನರ್ಗಿ ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ, ನಾಲ್ಕು ನೂರು ಲಕ್ಷ ರೂಪಾಯಿ ವೆಚ್ಚದ, 18 ದಶಾಂಶ 5 ಕಿಲೋ ಮೀಟರ್ ರಸ್ತೆ ಸುಧಾರಣೆ ಕಾಮಗಾರಿಗೆ, ಚಾಲನೆ ನೀಡಿ, ಅವರು ಮಾತನಾಡಿದರು. ತಿಕೋಟಾ ತಾಲೂಕಿನ ನೀರಾವರಿ ಯೋಜನೆಗಳಿಗಾಗಿ, 3 ಸಾವಿರದ 600 ಕೋಟಿ ರೂಪಾಯಿ ವಿನಿಯೋಗಿಸಿ, ಬರಡು ಭೂಮಿಗೆ ನೀರು ಒದಗಿಸಲಾಗಿದೆ. ಅಂತರ್ಜಲ ಮಟ್ಟ ಸಹ ಸಮೃದ್ಧಗೊಂಡಿದೆ. ರೈತರ ಬದುಕು ಸಹ್ಯವಾಗಿದೆ. ಭವಿಷ್ಯದ ಪೀಳಿಗೆಗೆ ಆರ್ಥಿಕ ಸುದೃಢತೆ ಖಾತ್ರಿ ಪಡಿಸಿದೆ, ಎಂದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಅಶೋಕ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, 5 ವ ರ್ದ ಬಾಲಕಿಯ ಹತ್ಯೆಗೈದ, ಬಿಹಾರ ರಾಜ್ಯದ ಪಾಟ್ನಾ ಮೂಲದ ಆರೋಪಿ, 35 ವರ್ಷದ ರಿತೇಶಕುಮಾರ, ಮಹಜರು ವೇಳೆ, ತಪ್ಪಿಸಿಕೊಳ್ಳಲು ಯತ್ನಿಸಿ, ಮೂವರು ಪೊಲೀಸರನ್ನು ಗಾಯಗೊಳಿಸಿದ ಹಿನ್ನೆಲೆ, ಆತ್ಮ ರಕ್ಷಣೆಗಾಗಿ ಪಿಎಸ್‌ಐ ಅನ್ನಪೂರ್ಣಾ ಅವರು ಹಾರಿಸಿದ, ಗುಂಡೇಟಿಗೆ ಸಾವನ್ನಪ್ಪಿದ್ದಾನೆ ಎಂದು, ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತ ಎನ್. ಶಶಿಕುಮಾರ, ತಿಳಿಸಿದ್ದಾರೆ.

<><><>

ಬಾಲಕಿ ಸಾವು ತಮಗೆ ದಿಗ್ಭ್ರಮೆ ಮೂಡಿಸಿದೆ; ನಾಗರಿಕ ಸಮಾಜ ತಲೆ ತಗ್ಗಿಸುವ ಹೇಯ ಕೃತ್ಯ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಸಂತಾಪ ವ್ಯಕ್ತ ಪಡಿಸಿದ್ದಾರೆ. ಹತ್ಯೆಯಾದ ಕಂದಮ್ಮಳ ಕುಟುಂಬಕ್ಕೆ ನ್ಯಾಯ ಕೊಡಿಸುವ ಜವಾಬ್ದಾರಿ ತಮ್ಮದು ಎಂದು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ಮೃತ ಬಾಲಕಿಯ ಕುಟುಂಬಕ್ಕೆ ಸಾಂತ್ವನ ತಿಳಿಸಿರುವ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಗುವಿನ ಆತ್ಮಕ್ಕೆ ಶಾಂತಿ ಕೋರಿ, ಪ್ರಾರ್ಥಿಸುವುದಾಗಿ, ಕಂಬನಿ ಮಿಡಿದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ವೈಶಾಖ ಮಾಸದ ಪ್ರಥಮ ದಿನ, ಬೈಸಾಖಿ ಹಾಗೂ ಸಿಖ್ಖರ, 10ನೇ ಗುರು ಗುರು ಗೋವಿಂದ್ ಸಿಂಗ್ ಅವರು, ಖಾಲ್ಸಾ ಪಂಥವನ್ನು ಆರಂಭಿಸಿದ ಶುಭ ದಿನ. ಸಿಖ್ ಬಂಧುಗಳು, ಗುರುದ್ವಾರಾಗಳಲ್ಲಿ, ವಿಶೇ ಪೂಜೆ ಮತ್ತು ಗುರು ವಾಣಿ ಪಠಣದಲ್ಲಿ ಶ್ರದ್ಧೆಯಿಂದ ಪಾಲ್ಗೊಂಡರು.

<><><>

ಕರಾವಳಿ ಜಿಲ್ಲೆಗಳ ಚರ್ಚ್‌ಗಳಲ್ಲಿ, ಶ್ರದ್ಧಾ, ಭಕ್ತಿಯಿಂದ ಪಾಮ್ ಸಂಡೇ ಆಚರಿಸಲಾಯಿತು. ವಿಶೇ ಕೃತಜ್ಞತಾ ಪೂಜೆ ಹಾಗೂ ಬೈಬಲ್ ಪ್ರಕಾರ, ಯೇಸುವಿನ ಕೊನೆಯ ದಿನಗಳ ಹಾದಿಯನ್ನು, ಪ್ರಾರ್ಥನೆ, ಕೀರ್ತನೆ ಹಾಗೂ ಧರ್ಮ ಗುರುಗಳು ಪ್ರವಚನದ ಮೂಲಕ ಪ್ರಚುರ ಪಡಿಸಿದರು.

<><><>

ಚಿಕ್ಕಬಳ್ಳಾಪುರ ಶಾಸಕ ಪ್ರದೀಪ ಈಶ್ವರ, ಗುಂಡ್ಲ ಮಂಡಿಕಲ್ಲು ಗ್ರಾಮದ, 38 ದಲಿತ ಕುಟುಂಬಗಳಿಗೆ, 40 ಲಕ್ಷ ರೂಪಾಯಿ ಅಂದಾಜು ಮೊತ್ತದಲ್ಲಿ, 38 ಶೌಚಾಲಯಗಳ ನಿರ್ಮಾಣ ಕಾಮಗಾರಿಗೆ, ಇಂದು ಚಾಲನೆ ನೀಡಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಭಾರತರತ್ನ ಬಿ.ಆರ್. ಅಂಬೇಡ್ಕರ್ ಅವರ, 134ನೇ ಜಯಂತ್ಯುತ್ಸವ; ಇಂದು ನಾಡಿನಾದ್ಯಂತ, ಶ್ರದ್ಧಾ ಸುಮನ ಅರ್ಪಣೆ.
- ಬಾಬಾಸಾಹೇಬರು, ಬೆಳಗಾವಿ ಹಾಗೂ ನಿಪ್ಪಾಣಿಗೆ ಭೇಟಿ ನೀಡಿ, 100 ವರ್ಷಗಳು ಪೂರ್ಣ; ವಿವಿಧೆಡೆ ಅರ್ಥಪೂರ್ಣ ಕಾರ್ಯಕ್ರಮ.
- ಜಾತಿ ಗಣತಿ ವರದಿ; ಎಲ್ಲರಿಗೂ ನ್ಯಾಯ ಒದಗಿಸಲು, ರಾಜ್ಯ ಸರ್ಕಾರ ಬದ್ಧ – ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ.
- ‘ಸಂವಿಧಾನ ಓದು’, ರಾಜ್ಯ ಮಟ್ಟದ ಎರಡು ದಿನಗಳ, ಅಧ್ಯಯನ ಶಿಬಿರಕ್ಕೆ, ಬೆಳಗಾವಿಯಲ್ಲಿ ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>